ಹೊದೆದುಕೊಂಡು! ನೋಡಿಯೇ ನನಗೆ ಬೆವರು ಬಂತು. ಆಮೇಲೆ ಅತ್ತೆಯ ತವರಿಗೆ ಹೋದಾಗ ಗೊತ್ತಾಯ್ತು, ಊರಿಗೆ ಊರೇ ಬೇಸಿಗೆಯಲ್ಲೂ ಕಂಬಳಿ ಹೊದೆಯುವ ಜನ! ಇವತ್ತಿಗೂ ನನ್ನ ಗಂಡನಿಗೆ ಮಕ್ಕಳ ಗಲಾಟೆ ಜೋಗುಳವಿದ್ದಂತೆ. ಟೀವಿಯ ಗದ್ದಲವೇ 'ರಿಲ್ಯಾಕ್ಸೇಶನ್ ಮ್ಯೂಸಿಕ್'! ಮಕ್ಕಳ ಗೌಜಿಗಿಂತ ಅವರನ್ನು ಸುಮ್ಮನಿರಿಸುವ ದೊಡ್ಡವರದ್ದೇ ಹೆಚ್ಚು ಗಲಾಟೆ ಎನ್ನುತ್ತಾರವರು.

ಪತಿಯ ಕೆಲಸದ ನಿಮಿತ್ತ ಸಂಸಾರ ಸಮೇತ ಜಪಾನಿಗೆ ಹೊರಟಾಗ ಅವರಿಗೆ ಭಾರೀ ಟೆನ್ಷನ್. 'ಅಲ್ಲಿ ಸಿಕ್ಕಾಪಟ್ಟೆ ಭೂಕಂಪ ಆಗುತ್ತದಂತೆ. ರಾತ್ರಿ ಮಲಗೋ ಮುನ್ನ ಭೂಕಂಪ ಆಯ್ತು ಅಂತಿಟ್ಕೋ. ಆಮೇಲೆ ಇಡೀರಾತ್ರಿ ನಿದ್ದೆ ಬರೋಕೆ ಸಾಧ್ಯವಾ?' ಎಂದು ತಲೆಕೆಡಿಸಿಕೊಂಡಿದ್ದರು. ಅಲ್ಲಿಗೆ ಹೋದ ಮೇಲೆ ಎಷ್ಟೊಂದು ಸಲ ನಾವು ಮಲಗಿದ ಹೊತ್ತಿನಲ್ಲೇ ಭೂಮಿ ಅದುರಿತು. ಹಾಸಿಗೆಯನ್ನು ಹಿಡಿದು ಬಲವಾಗಿ ಅಲುಗಾಡಿಸಿದಂತಾಗುತ್ತಿತ್ತು. ಒಮ್ಮೊಮ್ಮೆಯಂತೂ ಕಿಟಕಿ ಬಾಗಿಲುಗಳೆಲ್ಲ ಪಟಪಟ ಬಡಿದುಕೊಳ್ಳುತ್ತಿದ್ದವು. ಪತಿ ಮಹಾಶಯರಿಗೆ ಒಂದು ಸಲವಾದರೂ ಎಚ್ಚರಾಯಿತಾ ಕೇಳಿ, ಊಹೂಂ!

ಮತ್ತೊಮ್ಮೆ ಬೆಂಗಳೂರಿನಿಂದ ಪ್ಯಾರಿಸ್, ಅಲ್ಲಿಂದ ಯುಎಸ್ಎಗೆ ವಿಮಾನ ಪ್ರಯಾಣ ಮಾಡಬೇಕಿತ್ತು. ಬೆಂಗಳೂರಿನಲ್ಲಿ ವಿಮಾನ ಪ್ರವೇಶಿಸಿದ್ದೇ ಗಂಡ–ಮಗ ಮಲಗಿಬಿಟ್ಟರು. ಅರ್ಧಗಂಟೆಯಲ್ಲಿ ಹೊರಡಬೇಕಿದ್ದ ವಿಮಾನ ನಾಲ್ಕೂವರೆ ತಾಸು ಕಳೆದರೂ ಹಾರಲೇ ಇಲ್ಲ, ತಾಂತ್ರಿಕ ಸಮಸ್ಯೆ! ಕೆಳಗಿಳಿಯಲು ಅನೌನ್ಸ್ ಮಾಡುತ್ತಿದ್ದಂತೆ ಗಂಡನನ್ನು ಎಬ್ಬಿಸಿದೆ, 'ಅಂ, ಪ್ಯಾರಿಸ್ ಬಂತಾ' ಎನ್ನುತ್ತಾ ಎದ್ದರು. ಪೂರ್ತಿ ನಾಲ್ಕೂವರೆ ಗಂಟೆಯನ್ನು ನಾನು 'ಹೊರಡ್ತೇವಾ, ಇಲ್ಲವಾ' ಎಂಬ ಆತಂಕದಿಂದ ಕಳೆದಿದ್ದರೆ, ಅಪ್ಪ–ಮಗ 'ಡ್ರೀಮ್‌ಲೈನರ್ ಹತ್ತಿ ಪ್ಯಾರಿಸ್ ತಲುಪಿದ್ದರು. ಆವತ್ತಿನ ಪಯಣ ಕೊನೆಗೂ ಕನಸೇ ಆಯ್ತು, ಅದು ಬೇರೆ ಕತೆ.

ನಮ್ಮ ಹಿರಿಯ ದೊಡ್ಡಪ್ಪ ಇದ್ದಾಗ ನೆಂಟರು ಯಾರು ಬಂದರೂ ಅವರ ಮಾತುಕತೆ, ಹರಟೆಗೆ ಸಾಥ್ ಕೊಡುವ ಜವಾಬ್ದಾರಿ ಅವನದ್ದು. ರಾತ್ರಿ ಊಟವಾದ ಮೇಲೆ ಕವಳ ಹಾಕಿಕೊಂಡು ಕೆಲ ನೆಂಟರು ಧಾರಾಕಾರ ವಾಗ್ಝರಿ ಹರಿಸುತ್ತಿದ್ದರೆ, ಹಗಲಿಡೀ ತೋಟದಲ್ಲಿ ದುಡಿದು ದಣಿದಿರುತ್ತಿದ್ದ ದೊಡ್ಡಪ್ಪ ಎದುರಾಎದುರು ಕುಳಿತೇ, 'ಹ್ಹಹ್ಹ... ಹೌದ್ವಾದು... ಆಹಾ... ಓಹೋ...' ಎಂಬಿತ್ಯಾದಿ ರಸಭರಿತ ಪ್ರತಿಕ್ರಿಯೆ ನೀಡುತ್ತಲೇ ನಿದ್ದೆ ಮಾಡುತ್ತಿದ್ದ. ಮಾತಿನ ಲಹರಿಯಲ್ಲಿ ಮುಳುಗಿದವರಿಗೆ ಗೊತ್ತಾಗುತ್ತಿತ್ತೋ ಇಲ್ಲವೋ... ಆದರೆ ಈ ವಿಷಯ ಗೊತ್ತಿದ್ದ ನಾವು ಮಕ್ಕಳು ಬಾಗಿಲ ಹಿಂದೆ ಅಡಗಿ ನೋಡುತ್ತಾ ಇರುತ್ತಿದ್ದೆವು. ದೊಡ್ಡಪ್ಪನ ತೂಕಡಿಕೆ ನೋಡಿ ನಮಗೆ ಮುಸಿಮುಸಿ ನಗು, 'ನೆಂಟರಿಗೆ ಗೊತ್ತಾಗಿ ಹೋದರೆ' ಎಂಬ ಟೆನ್ಶನ್ ಬೇರೆ. ಇಷ್ಟಾಗಿಯೂ ತಾಸೊಂದೆರಡು ಆಗುತ್ತಿದ್ದಂತೆ ದೊಡ್ಡಪ್ಪ 'ಪರ್ಫೆಕ್ಟ್ ಹೋಸ್ಟ್' ಆಗಿ ನಸುನಗುತ್ತ 'ಹಂಗಾರೆ ಇನ್ನು ಮಲಗನ, ಹಾಸಿಗೆ ಹಾಸಿ ಇಟ್ಟಿದ್ದಿ' ಎನ್ನುತ್ತ ಸಮಾರೋಪ ಮಾತು ಆಡುತ್ತಿದ್ದ.

ನಮ್ಮ ಇನ್ನೊಬ್ಬರು ಸಂಬಂಧಿ ಇನ್‌ಸ್ಟಂಟ್ ನಿದ್ದೆಗೆ ಫೇಮಸ್ಸು. ಒಮ್ಮೆ ಇವರು ಯಾರದೋ ಮನೆಗೆ ಹೋದಾಗ ಮುಕ್ಕಾಲು ತಾಸು ಅದೂಇದೂ ಕತೆ ಹೇಳಿದರು. ಮನೆಯಾತ ಸೌಜನ್ಯದಿಂದ ಕೇಳಿಸಿಕೊಳ್ಳುತ್ತ ಹೋದರು. ಕೊನೆಗೊಮ್ಮೆ ತಾವೂ ಮಾತಾಡೋಣ ಎನಿಸಿ, 'ಹೌದು ಮಾರಾಯ... ಮೊನ್ನೆ ನಮ್ಮಲ್ಲೂ ಹಾಂಗೇ ಆತು...' ಎನ್ನುತ್ತ ತಮ್ಮ ಕತೆ ಶುರು ಮಾಡಿದರು. ನಾಲ್ಕು ವಾಕ್ಯ ಪೂರೈಸುವಷ್ಟರಲ್ಲಿ ಅತಿಥಿ ನಿದ್ರಾವಶ! 'ಥೋ ಮಾರಾಯ, ಅಂವನ ಕತೆ ಮುಕ್ಕಾಲು ತಾಸು ಕೇಳಿದ್ದಿ. ಅಂವ ನನ್ನ ಕತೆ ಎರಡು ನಿಮಿಷನೂ ಕೇಳಿದ್ನಿಲ್ಲೆ' ಎಂಬುದು ಅತಿಥೇಯರ ದೂರು.

ಕೆಲವರು ಹಗಲಿನ ಕಿರುನಿದ್ದೆಯ ವಿಷಯಕ್ಕೂ ಭಾರೀ ಅಚ್ಚುಕಟ್ಟು. ಮಕ್ಕಳಿಗೆಲ್ಲ ಕಡಕ್ ಎಚ್ಚರಿಕೆ ಕೊಟ್ಟು, ಟೀವಿ ಸದ್ದು ಇಳಿಸಿ, ಕಿಟಕಿ ಬಾಗಿಲು ಮುಚ್ಚಿ, ನಾಯಿ, ದನ ಸಾಕಿದ್ದರೆ ಅವಕ್ಕೆ ಅನ್ನ, ಮೇವು ಹಾಕಿಯೇ ಮಧ್ಯಾಹ್ನದ ನಿದ್ದೆಗೆ ತೆರಳುತ್ತಾರೆ. ಇಷ್ಟಾಗಿಯೂ ಯಾರಾದರೂ ನಿದ್ದೆಗೆ ಭಂಗ ತಂದರೆ ಅವರಿಗಾಗುವ ಕೋಪ ಅಷ್ಟಿಷ್ಟಲ್ಲ. ಅಂಚೆಪೇದೆ, ದೂರವಾಣಿ ಕರೆ, ಅನಿರೀಕ್ಷಿತ ನೆಂಟರು... ಇವರಿಗೆಲ್ಲಾ ಏನೂ ಅನ್ನುವ ಹಾಗಿಲ್ಲ. ಆದರೆ ಗಲಾಟೆ ಮಾಡಿದ ಮಕ್ಕಳೇನಾದರೂ ಕೈಗೆ ಸಿಕ್ಕರೋ... ಅಷ್ಟೇ! ಪುರಾಣ ಕಾಲದಲ್ಲಿ ಮುಚುಕುಂದ ಎಂಬ ಧೀರ ರಾಜ ಸುದೀರ್ಘ ಸಮಯ ದೇವತೆಗಳ ಪರವಾಗಿ ಯುದ್ಧ ಮಾಡಿ, ಅದಷ್ಟೂ ವರ್ಷಗಳ ನಿದ್ರಾಹೀನತೆಯನ್ನು ನೀಗಿಸಲೆಂದು ನಿರಾತಂಕ ನಿದ್ರೆಯ ವರ ಪಡೆದು ಮಲಗುತ್ತಾನಂತೆ. ಮುಂದೆ ಕೃಷ್ಣನನ್ನು ಬೆನ್ನಟ್ಟಿಕೊಂಡು ಬಂದ ಕಾಲಯವನ ಎಂಬಾತ ಗೊತ್ತಿಲ್ಲದೇ ಮುಚುಕುಂದನನ್ನು ಎಬ್ಬಿಸಿ, ಆತನ ಕಣ್‌ದೃಷ್ಟಿ ತಾಗುತ್ತಿದ್ದಂತೆಯೇ ಸುಟ್ಟು ಭಸ್ಮವಾದನಂತೆ. ನಮ್ಮ ಈ ನ್ಯಾಪಿತರಿಗೇನಾದರೂ ಅಂತ ಶಕ್ತಿಯಿದ್ದಿದ್ದಲ್ಲಿ ತುಂಟ ಮಕ್ಕಳೂ ಹುಡಿಯಾಗುತ್ತಿದ್ದರೇನೋ... ಪುಣ್ಯಕ್ಕೆ ದೇವರು ವರ ಕೊಡಲಿಲ್ಲ.

ನಮ್ಮಂಥವರಿಗೆ ಒಂದೆರಡು ದಿನ ನಿದ್ದೆ ಆಗಿಲ್ಲವೆಂದರೆ ಜಡತೆ, ತಲೆನೋವು ಶುರು. ಪಾಪ, ಆರಾರು ತಿಂಗಳು ಎಚ್ಚರಗೊಂಡೇ ಇರುತ್ತಿದ್ದ ಕುಂಭಕರ್ಣನ ಸ್ಥಿತಿ ಏನಾಗಬೇಕು? ಒಮ್ಮೆಗೆ ಆರು ತಿಂಗಳು ಮಲಗುತ್ತಿದ್ದ ನಿಜ, ಆದರೆ ಉಳಿದ ಸಮಯ ಹಗಲು ರಾತ್ರಿ ಬಿಟ್ಟ ಕಣ್ಣು ಬಿಟ್ಟುಕೊಂಡೇ ಬದುಕಬೇಕಲ್ಲ. ಕಂಠಬಿರಿ ತಿಂದ ಅವನಿಗೆ ಕಣ್ಣು ಕೂರುತ್ತಿರಲಿಲ್ಲವೇ... ಓಡಾಡಿ, ಹಾರಾಡಿ, ಹೋರಾಡಿ ಸುಸ್ತಾಗುತ್ತಿರಲಿಲ್ಲವೇ...? ಇಡೀ ಲಂಕೆಯ ಜನರೆಲ್ಲ ವಿಶ್ರಮಿಸುವಾಗ... ಹೆಂಡತಿಯರಾದ ವಜ್ರಮಾಲಾ, ಕಾರ್ಕತಿಯರು ನಿದ್ರಿಸುವಾಗ 'ಎಲ್ಲ ಮಲಗಿರುವಾಗ ಇಲ್ಲ ಸಲ್ಲದ ನೆವವ ಹೂಡಿ ಬರದಿರು ಮತ್ತೆ ಹಳೆಯ ವರವೇ' ಎಂದು ಆತ ಹಾಡುತ್ತ ಕುಳಿತಿದ್ದಿರಬಹುದೇ? ಏಕೆಂದರೆ 'ಇಂದ್ರಾಸನ' ಪಡೆಯಲು ತಪಸ್ಸು ಮಾಡಿದವ, ಇಂದ್ರ–ಸರಸ್ವತಿಯರ ಹುನ್ನಾರದಿಂದಾಗಿ ಪಡೆದ ವರವೇ ಈ 'ನಿದ್ರಾಸನ' ಎಂಬೋ ಶಾಪ. ದೇವರೇನು ಕಮ್ಮಿಯಿಲ್ಲ... 'ಎದ್ದೇಳು ಮಂಜುನಾಥ' ಎಂದ ಮೇಲೆಯೇ ಮಹೇಶ್ವರನೂ... 'ರಮಣನೇ ಬೆಳಗಾಯಿತು, ಶೃಂಗಾರದ ನಿದ್ದೆ ಸಾಕು' ಎಂದು ಲಕುಮಿ ಎಬ್ಬಿಸಿದ ಮೇಲೆಯೇ ನಾರಾಯಣನೂ ಏಳುವುದು.



ಪರಿಪೂರ್ಣ ನಿದ್ದೆಯ ಬೆಲೆ ಏನೆಂದು ಹಸಿಬಾಣಂತಿಯನ್ನು ಕೇಳಿ ನೋಡಿ. ಇಡೀಹೊತ್ತು ಅಳುವ ಎಳೆಶಿಶು, ಪಥ್ಯ–ಸ್ನಾನ, ಉಚ್ಚೆ–ರಚ್ಚೆಗಳಿಂದ ಒಂಚೂರು ಬಿಡುವು ಸಿಗುವುದು ಮಲಗಿದಷ್ಟು ಹೊತ್ತು ಮಾತ್ರ. ಆದರೆ ನಿದ್ದೆಯೆಂಬುದು ಮರುಭೂಮಿಯ ಮಳೆಗಿಂತ ದುರ್ಲಭ್ಯ ಆಕೆಗೆ. ಮನೆಯವರೆಲ್ಲಾ ಮಲಗಿ, ತನ್ನವೂ ಕಣ್ಣುರೆಪ್ಪೆಗಳೆರಡು 'ಅಪ್ಪಿಕೋ ಯನ್ನ ಅಪ್ಪಿಕೋ' ಎಂದು ಯುಗಳಗೀತೆ ಹಾಡುವ ಹೊತ್ತಿನಲ್ಲಿ ಗಂಟಲು ಹರಿದುಕೊಂಡು 'ಎತ್ತಿಕೋ ಯನ್ನ ಎತ್ತಿಕೋ' ಎಂದು ಮಿಡ್‌ನೈಟ್ ರಾಗ ಹಾಡುವ ಮಗು... ಒಂದು–ಎರಡು... ಬಟ್ಟೆ ಬದಲು... ಎರಡು ತಾಸಿಗೊಮ್ಮೆ ಸ್ತನ್ಯಪಾನ... ತಿಂಗಳಾಗುವಷ್ಟರಲ್ಲಿ ನಿದ್ದೆಯಿಲ್ಲದೇ ಆಕೆ ಝೂಂಬಿಯಂತಾಗಿರುತ್ತಾಳೆ. 'ಸನ್ನಿ'ಯೂ ಇಲ್ಲ, ಮಣ್ಣೂ ಇಲ್ಲ, ನಿದ್ರಾಹೀನತೆಯೇ ಕಾರಣ ಎಲ್ಲ.

ಮಧ್ಯಾಹ್ನದ ನಿದ್ದೆ ಆಲಸ್ಯಕ್ಕೆ ದಾರಿ ಎನ್ನುತ್ತಾರೆ ಹಲವರು. ಆದರೆ ಮೆಡಿಟರೇನಿಯನ್ ಪ್ರದೇಶದಲ್ಲಿ, ಸ್ಪೇನ್ ಮತ್ತು ದಕ್ಷಿಣ ಅಮೇರಿಕದ ದೇಶಗಳಲ್ಲಿ ಇಂಥ 'ಸಿಯೆಸ್ಟಾ' ಸಹಜ ದಿನಚರಿ. ಜಪಾನ್‌ನಲ್ಲಿ 'ಇನೆಮುರಿ' ಎಂಬ ವಿಶೇಷ ಪದ್ಧತಿ ಉಂಟು. ಅಲ್ಲಿಯ ಜನ ಅವಧಿ ಮೀರಿ ದುಡಿಯುವುದು ಸಾಮಾನ್ಯ. ನಿರಂತರ ದುಡಿತದಿಂದ ದಣಿದವರು ಅಕಸ್ಮಾತ್ ಕೆಲಸದ ಮಧ್ಯೆ ನಿದ್ದೆ ಹೋದರೆ ಅದನ್ನು ಪರಿಶ್ರಮದ ಪ್ರತಿಫಲ ಎಂದೇ ಭಾವಿಸಲಾಗುತ್ತದೆ. ಜಪಾನಿಗೆ ಹೋದ ಶುರುವಿನಲ್ಲಿ ನನ್ನ ಪತಿ ಮೀಟಿಂಗ್‌ನಲ್ಲಿ ನಿದ್ರಿಸುತ್ತಿದ್ದ ಸಹೋದ್ಯೋಗಿಗಳನ್ನು ಕಂಡು ತಬ್ಬಿಬ್ಬಾಗುತ್ತಿದ್ದರು. ಅಲ್ಲಿಯ ಕಾಯಕಸಂಸ್ಕೃತಿ ಅರಿವಾದ ಮೇಲೆ ಅದನ್ನು ಗೌರವಿಸಲಾರಂಭಿಸಿದರು.

ಗಡಿಬಿಡಿ, ಕೆಲಸದ ಮಧ್ಯೆ ಪುಟ್ಟ ನಿದ್ದೆ ಮಾಡುವುದಕ್ಕೆ 'ಕೋಳಿ ನಿದ್ದೆ' ಎನ್ನುತ್ತಾರೆ ನಮ್ಮಲ್ಲಿ. ಅಂತೆಯೇ ಸುದೀರ್ಘ ಕಾಲ ಮಲಗುವುದಕ್ಕೆ 'ಕೊವಾಲಾ ನಿದ್ದೆ' ಎನ್ನಬಹುದೇನೋ. ಹೇಳಿಕೇಳಿ ದಿನಕ್ಕೆ 18ರಿಂದ 22 ತಾಸು ನಿದ್ದೆ ಮಾಡುವ ಪ್ರಾಣಿ ಅದು. ಕೋಳಿಯಂತೆಯೋ, ಕೊವಾಲಾದಂತೆಯೋ... ಎಲ್ಲರೂ ಬಯಸುವ ಭಾಗ್ಯ ನಿದ್ದೆ. 'ಆವ ರೂಪದೊಳು ಬಂದರೂ ಸರಿಯೇ... ಆವ ವೇಷದೊಳು ಬಂದರೂ ಸರಿಯೇ...'! ಸುಲಭಕ್ಕೆ ಬಂದರೆ ಸೌಭಾಗ್ಯ, ಇಲ್ಲದಿದ್ದರೂ 'ತಲ್ಲಣಿಸದಿರು ಕಂಡ್ಯ ತಾಳು ಮನವೇ, ಎಲ್ಲರನೂ ಸಲಹುವುದು ಇದಕೆ ಸಂಶಯವಿಲ್ಲ.' ■